# ಹಿಮಾಲಯದ ಬೈಕರ್‌ಗಳ ಸನ್ನಿಧಿಯಲ್ಲಿ..

ದಾರಿ ಮಧ್ಯೆ ಪೆಟ್ರೋಲ್ ಖಾಲಿಯಾಯಿತು. ಜೋರು ಗಾಳಿ ಮಳೆಗೆ ಕ್ಯಾನ್‌ನಿಂದ ಪೆಟ್ರೋಲ್ ತೆಗೆದು ಬೈಕ್‌ನ ಟ್ಯಾಂಕ್‌ಗೆ ಸುರಿಯಲು ಆಗುತ್ತಿರಲಿಲ್ಲ. ಅಷ್ಟರಲ್ಲೇ ಭಾರತೀಯ ಸೇನೆಯ ಇಬ್ಬರು ಯೋಧರು ಕಾಣಿಸಿಕೊಂಡು ನಮ್ಮ ನೆರವಿಗೆ ಬಂದರು.

■ ಚಿತ್ರ– ಲೇಖನ: **ಸಚಿತ್ ರಾಜು**




ಸಾಹಸಯಾತ್ರೆ ಕೈಗೊಂಡ ತಂಡ

ಹಿಮಾಲಯದ ತಪ್ಪಲಲ್ಲಿ ಒಂದು ಸುತ್ತು ಬೈಕ್ ಓಡಿಸುವ ಸಾಹಸ ನಮ್ಮದು. ಒಟ್ಟು ಹನ್ನೊಂದು ಜನ ಸ್ನೇಹಿತರು. ದೆಹಲಿಯ ವಿಮಾನ ನಿಲ್ದಾಣದಲ್ಲಿ ಇಳಿದು, ರಿಸರ್ವ್ ಬ್ಯಾಂಕ್‌ನ ಅತಿಥಿ ಗೃಹದಲ್ಲಿ ಮಧ್ಯಾಹ್ನದ ಊಟ ಮುಗಿಸಿ ಮನಾಲಿಯ ಕಡೆಗೆ ಬಸ್‌ನಲ್ಲಿ ಹೊರಟೆವು. ಮನಾಲಿ ಸಮೀಪಿಸುತ್ತಿದ್ದಂತೆಯೇ ಬಿಯಾಸ್ ನದಿಯ ಆರ್ಭಟಕ್ಕೆ ಎಚ್ಚರಗೊಂಡೆವು. ನದಿ ಮತ್ತು ಹಿನ್ನೆಲೆಯಲ್ಲಿ ಪರ್ವತಗಳಿರುವ ದೃಶ್ಯ ರುದ್ರರಮಣೀಯ. ಅಚ್ಚರಿಯ ಸಂಗತಿಯೆಂದರೆ, ಅಲ್ಲಿ ಎಲ್ಲೆಂದರಲ್ಲಿ ಗಾಂಜಾ ಗಿಡಗಳು!

ನಾವು ಕಾಯ್ದಿರಿಸಿದ್ದ ಬೈಕ್‌ಗಳ ಮಾಲೀಕ ಸನ್ನಿ ಮನಾಲಿಯ ಬಸ್‌ಸ್ಟ್ಯಾಂಡ್‌ಗೆ ಬಂದ. ಕಾರಿನಲ್ಲೇ ನಮ್ಮನ್ನೆಲ್ಲಾ ತನಗೆ ಗೊತ್ತಿರುವ ಹೋಟೆಲ್‌ಗೆ ಕರೆದೊಯ್ದ. ಅಲ್ಲಿಂದ ರೊಹ್ಟಾಂಗ್ ಪಾಸ್ ಕಡೆಗೆ ಬೈಕ್‌ಗಳನ್ನು ಹೊರಡಿಸಿದೆವು. ಒಟ್ಟು ನಾಲ್ಕು ಬೈಕ್‌ಗಳು, ಹಾಗೂ ಒಂದು ಇನ್ನೋವಾ ಕಾರಿನಲ್ಲಿ ನಮ್ಮ ಪ್ರಯಾಣ. ಬಟ್ಟೆ, ಕ್ಯಾಮೆರಾ ಇತ್ಯಾದಿಗಳನ್ನು ಇಡಲು ಮತ್ತು ಬೈಕ್ ಸವಾರಿಯ ದಣಿವಾರಿಸಲು, ನಮ್ಮನ್ನೆಲ್ಲಾ ಹಿಂಬಾಲಿಸಲು ಕಾರು ಸಹಾಯಕವಾಗುತ್ತದೆ ಎನ್ನುವುದು ನಮ್ಮ ಲೆಕ್ಕಾಚಾರ. ನಮ್ಮ ಗುಂಪಿನಲ್ಲಿ ಇಬ್ಬರು ಹುಡುಗಿಯರು ಇದ್ದದ್ದೂ ಅದಕ್ಕೆ ಇನ್ನೊಂದು ಕಾರಣ. (ಆದರೆ ಕೊನೆಗೆ ಎಲ್ಲರಿಗಿಂತ ಹೆಚ್ಚಾಗಿ ಬೈಕ್ ಸವಾರಿ ಮಾಡಿದವರು ಅವರೇ!)

ರಾತ್ರಿಯ ವೇಳೆಗೆ ಸುಮಾರು 150 ಕಿ.ಮೀ ದೂರದ ಜಿಸ್ಪಾ ತಲುಪಿದೆವು. ಅಲ್ಲಿನ ಬಿಡಾರಗಳಲ್ಲಿ ತಂಗಿದೆವು. ಆ ಅನುಭವವೇ ಅನನ್ಯ. ಬೆಟ್ಟದ ತಪ್ಪಲು, ಸುತ್ತಲೂ ಕಾಡಿನಂತೆ ಬೆಳೆದ ಸೇಬಿನ ಮರಗಳು, ನದಿಯ ಭೋರ್ಗರೆತದ ಸದ್ದು. ಆಕಾಶದಲ್ಲಿ ಅಸಂಖ್ಯ ಮಿನುಗು ತಾರೆಗಳು. ಕೆಳಗೆ ನಾವು ಬಾಹ್ಯ ಪ್ರಪಂಚದಿಂದ ದೂರ..

ಮರುದಿನ ಬೆಳಿಗ್ಗೆ ಲಡಾಖ್ ಪ್ರಾಂತ್ಯದ ಲೇಹ್‌ನತ್ತ ಪ್ರಯಾಣ. ನನ್ನ